**ಮೆ: ಸತೀಶ್ ಶುಗರ್ಸ್ ಲಿಮಿಟೆಡ್, ಇವರು ಸರ್ವೆ ನಂ: 367, 368, 369, 370, 371, 372, 373, 374, 375, 376, ಮತ್ತು 377, ಬೀರನಗಡ್ಡಿ ಮತ್ತು ಹುಣಶ್ಯಾಳ ಗ್ರಾಮಗಳ, ಗೋಕಾಕ ತಾಲ್ಲೂಕ, ಬೆಳಗಾವಿ ಜಿಲ್ಲೆಯಲ್ಲಿ 8.86 ಎಕರೆ ಪ್ರದೇಶದಲ್ಲಿ "ರಿರೋಲ್ಡ್ ಸ್ಟೀಲ್" ಉತ್ಪನ್ನಗಳಾದ ಸುತ್ತಿನ ವಿನ್ಯಾಸ ಮತ್ತು ಟಿ.ಎಂ.ಟಿ. ಬಾರ್‌ಗಳ ತಯಾರಿಕೆಗಾಗಿ, ಅರೆ ಮುಗಿದ ಉಕ್ಕಿನ (ಎಂ.ಎಸ್ ಬಿಲೆಟ್ಸ್) ಆನ್‌ಲೈನ್ ಬಿಸಿ ಚಾರ್ಜಿಂಗ್‌ನೊಂದಿಗೆ ಮಿಲ್ಲ್‌ನ್ನು ಮರುಹೊಂದಿಸುವುದು, 2X8 MT ಇಂಡಕ್ಷನ್ ಫರ್ನೆಸ್‌ಅನ್ನು 2X10 MT ಕಂಟಿನ್ಯುಯಸ್ ಕಾಸ್ಟಿಂಗ್ ಮಶಿನ್ ಮತ್ತು ರಿರೋಲಿಂಗ್ ಮಿಲ್ ನಲ್ಲಿ ಬಿಸಿ ಚಾರ್ಜಿಂಗ್‌ಅನ್ನು ಅಸ್ತಿತ್ವದಲ್ಲಿರುವ ಯೋಜನೆಯ ಅವರಣದಲ್ಲಿ ಟಿ.ಎಂ.ಟಿ ಬಾರಗಳನ್ನು ಉತ್ಪಾದಿಸುವ ಮೂಲಕ 99,000 TPA, ಸಾಮರ್ಥ್ಯದ ಉತ್ಪಾದನೆ ಮಾಡವ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಉದ್ದೇಶಿತ ಯೋಜನೆಯ ಹಿನ್ನೆಲೆಯಲ್ಲಿ ದಿನಾಂಕ: 13-04-2022 ರಂದು ಬೆಳಿಗ್ಗೆ 11:00 ಘಂಟೆ ನಡೆದ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.**

ಸ್ಥಳ : ಮೆ: ಸತೀಶ್ ಶುಗರ್ಸ್ ಲಿಮಿಟೆಡ್, ಸರ್ವೆ ನಂ: 367, 368, 369, 370, 371, 372, 373, 374, 375, 376, ಮತ್ತು 377, ಬೀರನಗಡ್ಡಿ ಮತ್ತು ಹುಣಶ್ಯಾಳ ಗ್ರಾಮಗಳ, ಗೋಕಾಕ ತಾಲ್ಲೂಕ, ಬೆಳಗಾವಿ ಜಿಲ್ಲೆ.

ಮೆ: ಸತೀಶ್ ಶುಗರ್ಸ್ ಲಿಮಿಟೆಡ್, ಇವರು ಸರ್ವೆ ನಂ: 367, 368, 369, 370, 371, 372, 373, 374, 375, 376, ಮತ್ತು 377, ಬೀರನಗಡ್ಡಿ ಮತ್ತು ಹುಣಶ್ಯಾಳ ಗ್ರಾಮಗಳ, ಗೋಕಾಕ ತಾಲ್ಲೂಕ, ಬೆಳಗಾವಿ ಜಿಲ್ಲೆಯಲ್ಲಿ 8.86 ಎಕರೆ ಪ್ರದೇಶದಲ್ಲಿ "ರಿರೋಲ್ಡ್ ಸ್ಟೀಲ್" ಉತ್ಪನ್ನಗಳಾದ ಸುತ್ತಿನ ವಿನ್ಯಾಸ ಮತ್ತು ಟಿ.ಎಂ.ಟಿ. ಬಾರ್‌ಗಳ ತಯಾರಿಕೆಗಾಗಿ, ಅರೆ ಮುಗಿದ ಉಕ್ಕಿನ (ಎಂ.ಎಸ್ ಬಿಲೆಟ್ಸ್) ಆನ್‌ಲೈನ್ ಬಿಸಿ ಚಾರ್ಜಿಂಗ್‌ನೊಂದಿಗೆ ಮಿಲ್ಲ್‌ನ್ನು ಮರುಹೊಂದಿಸುವುದು, 2X8 MT ಇಂಡಕ್ಷನ್ ಫರ್ನೆಸ್‌ಅನ್ನು 2X10 MT ಕಂಟಿನ್ಯುಯಸ್ ಕಾಸ್ಟಿಂಗ್ ಮಶಿನ್ ಮತ್ತು ರಿರೋಲಿಂಗ್ ಮಿಲ್ ನಲ್ಲಿ ಬಿಸಿ ಚಾರ್ಜಿಂಗ್‌ಅನ್ನು ಅಸ್ತಿತ್ವದಲ್ಲಿರುವ ಯೋಜನೆಯ ಅವರಣದಲ್ಲಿ ಟಿ.ಎಂ.ಟಿ ಬಾರಗಳನ್ನು ಉತ್ಪಾದಿಸುವ ಮೂಲಕ 99,000 TPA, ಸಾಮರ್ಥ್ಯದ ಉತ್ಪಾದನೆ ಮಾಡವ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 13-04-2022 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | | ಮೆ: ಸತೀಶ್ ಶುಗರ್ಸ್ ಲಿಮಿಟೆಡ್, ಸರ್ವೆ ನಂ: 367, 368, 369, 370, 371, 372, 373, 374, 375, 376, ಮತ್ತು 377, ಬೀರನಗಡ್ಡಿ ಮತ್ತು ಹುಣಶ್ಯಾಳ ಗ್ರಾಮಗಳ, ಗೋಕಾಕ ತಾಲ್ಲೂಕ, ಬೆಳಗಾವಿ ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | | ಅನುಬಂಧ-4 |
| ಪಾವರ ಪಾಯಿಂಟ್ ಪ್ರಸ್ತುತಿ ವಿವರಗಳು | | ಅನುಬಂಧ-5 |
| ಸಾರ್ವಜನಿಕರು ಲಿಖಿತ ರೂಪದಲ್ಲಿ ಸಲ್ಲಿಸಿದ ಅಹವಾಲುಗಳು | : | ಅನುಬಂಧ-6 |

**ಪೀಠಿಕೆ:**

ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ, ಭಾರತ ಸರಕಾರ, ಇವರು ದಿನಾಂಕ 14-09-2006 (ತಿದ್ದುಪಡಿ ದಿನಾಂಕ 01-12-2009) ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಈ ನಿಟ್ಟಿನಲ್ಲಿ ಪರಿಸರ ಕುರಿತು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಮತ್ತು ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಕ.ರಾ.ಮಾ.ನಿ ಮಂಡಳಿಯದ್ದಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಾಯ ಪ್ರಾಧಿಕಾರ, ಕರ್ನಾಟಕ ಇವರು ಸದರಿ ಯೋಜನೆಯ Terms of Reference ಪತ್ರ ಸಂಖ್ಯೆ: SEIAA 37 IND 2021 Dated:23-11-2021 ರಂದು ಅಂತಿಮಗೊಳಿಸಿ ಅದರಂತೆ ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಾಯ ಪ್ರಾಧಿಕಾರ, ಕರ್ನಾಟಕ ಸರ್ಕಾರ ಇವರು ಸದರಿ ಯೋಜನೆ (ಟಿ ಓ ಆರ್) ಅನ್ನು ಅಂತಿಮಗೊಳಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸಲು **ಮೆ: ಸತೀಶ್ ಶುಗರ್ಸ್ ಲಿಮಿಟೆಡ್, ಸರ್ವೆ ನಂ: 367, 368, 369, 370, 371, 372, 373, 374, 375, 376, ಮತ್ತು 377, ಬೀರನಗಡ್ಡಿ ಮತ್ತು ಹುಣಶ್ಯಾಳ ಗ್ರಾಮಗಳ, ಗೋಕಾಕ ತಾಲ್ಲೂಕ, ಬೆಳಗಾವಿ ಜಿಲ್ಲೆ** ಇವರಿಗೆ ತಿಳಿಸಿರುತ್ತಾರೆ. ಸದರಿ ಯೋಜನೆಯ ಅದಿಭೋಗದಾರರು ಪತ್ರ ದಿನಾಂಕ: 18-01-2022 ರಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಕೋರಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ಉದ್ದೇಶಿತ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ, ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದಲ್ಲಿ ಪತ್ರಿಕೆಗಳಾದ "ವಿಜಯ ಕರ್ನಾಟಕ" (ಕನ್ನಡ ಭಾಷೆ) "ಡೆಕ್ಕನ್ ಹೆರಾಲ್ಡ್" (ಆಂಗ್ಲ ಭಾಷೆ) 12-03-2022 ರಂದು ಹಾಗೂ ಸ್ಥಳೀಯ ಮಟ್ಟದಲ್ಲಿ "ವಿಜಯವಾಣಿ" ಕನ್ನಡ ಪತ್ರಿಕೆಯಲ್ಲಿ 16-03-2022 ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು, ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 13-04-2022 ರಂದು ಬೆಳಿಗ್ಗೆ 11:00 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಪ್ರದೀಪ ಮಮದಾಪೂರ. ಪರಿಸರ ಅಧಿಕಾರಿಗಳು ಪ್ರಭಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-2 (ಚಿಕ್ಕೋಡಿ) ಇವರು ಮತ್ತು **ಶ್ರೀ ಆಶೋಕ ದುಡಗುಂಟಿ** ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, **ಶ್ರೀ. ರಾಜಶೇಖರ ಬಿ ಪುರಾಣಿಕ,** ವಲಯ ಹಿರಿಯ ಪರಿಸರ ಅಧಿಕಾರಿಗಳು (ಪ್ರಭಾರ), ವಿಭಾಗೀಯ ಕಛೇರಿ, ಧಾರವಾಡ, ರವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಒಂಬತ್ತು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ

ಇವರು ಮಾತನಾಡುತ್ತಾ

ಎಲ್ಲರಿಗೂ ನಮಸ್ಕಾರ, ಕರ್ನಾಟಕ ರಾಜ್ಯ ನಿಯಂತ್ರಣ ಮಂಡಳಿ, ಸತೀಶ ಸುಗರ್ಸ್ ಲಿಮಿಟೆಡ್ ಟಿ ಎಮ್ ಟಿ ವಿಭಾಗ ಈ ಯೋಜನೆಯ ಆವರಣದಲ್ಲಿ ಟಿ ಎಮ್ ಟಿ ಬಾರಗಳನ್ನು ಉತ್ಪಾಧಿಸುವ ಮೂಲಕ 99000 ಟಿಪಿಎ ಸಾಮರ್ಥ್ಯದ ಯೋಜನೆಯ ಸ್ಥಾಪನೆಯ ಕುರಿತಾದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಇವತ್ತು ಕಾರ್ಖಾನೆಯ ಆವರಣದಲ್ಲಿ ಕರ್ನಾಟಕ ರಾಜ್ಯ ನಿಯಂತ್ರಣ ಮಂಡಳಿಯಿಂದ ಆಯೋಜಿಸಲಾಗಿದೆ. ಈಗಾಗಲೇ ಇವರು Environment Health and safty consultant pvt ltd., Bangaluru ಯೋಜನಾ ವರದಿ ತಯಾರಿಸಿ present ಮಾಡಿದಾರೇ, ಅದರ ಮೇಲೆ ಇಲ್ಲಿ ಎಲ್ಲಾ ಸೇರಿರತಕ್ಕಂಹ ಈ ಕಾರ್ಖಾನೆಯ ಸುತ್ತ-ಮುತ್ತಲಿನ ಗ್ರಾಮದ ರೈತರು, ಇನ್ನಿತರ ಎಲ್ಲರೂ ಸೇರಿದ್ದೀರಿ, ತಮ್ಮ-ತಮ್ಮ ಅಭಿಪ್ರಾಯಗಳನ್ನು ಕೂಡಾ ವ್ಯಕ್ತಪಡಿಸಿದ್ದೀರಿ, ತಮ್ಮ ಎಲ್ಲಾ ಅಭಿಪ್ರಾಯಗಳನ್ನು ಕರ್ನಾಟಕ ರಾಜ್ಯ ನಿಯಂತ್ರಣ ಮಂಡಳಿಯವರು ಕ್ರೋಡಿಕರಣ ಮಾಡಿಕೊಂಡಿದ್ದಾರೆ. ಈಗ ತಾವೂ ಅಭಿಪ್ರಾಯವನ್ನು ಸಲ್ಲಿಸಿದ್ದೀರಿ. ಅದು ಎಲ್ಲಾ ಆಡಿಯೋ ರೆಕಾರ್ಡ್ ಮತ್ತು ವಿಡಿಯೋ ಚಿತ್ರೀಕರಣ ಆಗಿದೆ. ಕ್ರೋಡಿಕರಣ ಮಾಡಿದ ವಿಸ್ಥೃತವಾದ ವರದಿಯನ್ನು State level Environmental impact assessment authority ಗೆ ಸಲ್ಲಿಸತಕ್ಕಂತಹ ಕೆಲಸ ಮಾಡತ್ತೀವಿ.

ವಂದನಾರ್ಪಣೆಯೊಂದಿಗೆ ಈ ಸಭೆಯು ಮುಕ್ತಾಯಗೊಂಡಿತು.

(ಶ್ರೀ. ಕ ಮುಡಗುಂಟಿ.
ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ
ದಂಡಾಧಿಕಾರಿಗಳು ಮತ್ತು ಪರಿಸರ ಸಾರ್ವಜನಿಕ
ಆಲಿಕೆ ಸಭೆ ಅಧ್ಯಕ್ಷರು ಬೆಳಗಾವಿ, ಕರ್ನಾಟಕ